533

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 8ನೇ ಆಗಸ್ಟ್ 1884.

ಮೊಲೂರು ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಯಂ. ಗುಲಾಂಮೊಹದ್ದೀರಿಗೆ, 23ನೇ ಸೆಕ್ಷನ್ (ಬಿ) ಕ್ಲಾಜ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ, (ಸೆಕ್ಷನ್ 135.)
2. ಅವರಿಗೆ ದಸ್ಯಾಫ್ತಿ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕಸೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ, (ಸೆಕ್ಷನ್ 141.)
3. ನಿರೋಧಗಳನ್ನು ಅಡ್ಡೀಪಡಿಸುವಂತೆ ಹುಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇತಿಗೆಗಳು ಬಾರ್‌ಬಾರ್ ನಡಿಯದಂತೆ ಅಡ್ಡೀಪಡಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ, (ಸೆಕ್ಷನ್ 519.)

ಸಿ. ಸುಬ್ಬರಾವ್,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

---

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ ಯವರ ಕೋರ್ಟಿನಲ್ಲಿ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 272.

ಮೃತಪಟ್ಟ ಕೆಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಿಂಗೇಗೌಡ, ಮೃತಪಟ್ಟ ಸದರೀ ಕೆಂಗೇಗೌಡನಿಗೆ ಚಿಕ್ಕಪ್ಪ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ಮಧರನಹಳ್ಳಿ ಕೊಪ್ಪಲ ಸ್ಥಳದ ಸದರೀ ನಿಂಗೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಕೆಂಗೇಗೌಡನ ಜಿಂದ ಗಿಬ್ಬಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಿಂಗೇಗೌಡನ ಅರ್ಜೀಯನ್ನು 1884ನೇ ಇಸವೀ ಕಪ್ಟಂಬರ್ ತಿಂಗಳು ತಾರೀಖು 5ಕ್ಕಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಗೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

---

1884ನೇ ಇಸವಿ ಅರ್ಜೀ ನಂಬರ್ 273.

ಮೃತಪಟ್ಟ ಸ್ಯ ಹವಾಲ್ದಾರ್ ರಾಂಜೀರಾಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಾಹದೋಜಿರಾಯನು, ಮೃತಪಟ್ಟ ಸದರೀ ರಾಂಜಿರಾಯನಿಗೆ ಮೊಮ್ಮಗ ಆಗಬೇಕೆಂಬ ಹಕ್ಕುದಾರೀಮೇಲೆ ಮೈಸೂರು ಕೃಷ್ಣರಾಜಮೊಲ್ಲಾ ಸ್ಥಳದ ಸದರೀ ಮಹದೋಜಿರಾಯನು ಸದರೀ ವಾಸಸ್ಥನಾಗಿ ಮೃತಪಟ್ಟ ರಾಂಜೀರಾಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಹದೋಜಿರಾಯನ ಅರ್ಜೀಯನ್ನು 1884ನೇ ಇಸವಿ ಕಪ್ಟಂಬರ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಂಜೀರಾಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಆಗಸ್ಟು ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

---